ಶ್ರೀ ಎ. ಆರ್. ಬದರೀನಾರಾಯಣ್.—ಈ ವರ್ಷದಲ್ಲಿ ಎಲ್ಲ ಗ್ರಾಮಗಳಲ್ಲೂ ಕಟ್ಟಡಗಳನ್ನು ಶಾಲೆಗಳಿಗಾಗಿ ಒದಗಿಸಬೇಕೆಂದು ಇದೆ. 42 ಕಡೆಗಳಲ್ಲಿ ಶಾಲೆಗಳಿಗೆ ಕಟ್ಟಡಗಳಿಲ್ಲ ಎಂದು ತಿಳಿದಿದೆ. ಇದರಲ್ಲಿ ಈ ವರ್ಷ 20 ಕಟ್ಟಡಗಳನ್ನು ಕಟ್ಟಿಸಬೇಕೆಂದು ಇದೆ. ಮುಂದಿನ ವರ್ಷದಲ್ಲಿ ಉಳಿದಿರುವ 22 ಕಟ್ಟಡಗಳನ್ನು ಮಾಡಿ ಮುಗಿಸಬೇಕೆಂದು ಇದ್ದೇವೆ.

ಶ್ರೀ ಎಂ. ಎಂ. ಸಜ್ಜನ್.—ಇಲ್ಲಿಯವರೆಗೆ ಈ ಗ್ರಾಮಗಳಲ್ಲಿರುವ ಶಾಲೆಗಳಿಗೆ ಕಟ್ಟಡಗಳನ್ನು ಕಟ್ಟಿಸದೇ ಇರಲು ಕಾರಣವೇನು ?

ಶ್ರೀ ಎ. ಆರ್. ಬದರೀನಾರಾಯಣ್.—ಹಣದ ಅಭಾವದಿಂದ ಇವನ್ನು ಮಾಡಲಾಗಲಿಲ್ಲ.

## Transfer of Primary School Teachers

70. Sri V. M. GHADI (Haliyal).—

Will the Minister for Education be pleased to state:—

(*a*) whether it is a fact that during May and June 1972, the Deputy Director of Education, Karwar, has transferred more than 300 Primary teachers outside their native taluks;

(*b*) if so, the number of lady teachers who have been transferred and separated from their husband teachers;

(*c*) the number of transfers cancelled and modified by him and why;

(*d*) how many premature transfers have been made during these two months and reasons for the same;

(*e*) the steps they propose to take to remedy the inconvenience caused to couples ?

Sri A. R. RADARINARAYANA (Minister for Education).—

(*a*) Only 293 teachers were transferred.

(*b*) 80.

(*c*) 27. This has been done to mitigate the hardship and with a view to keeping husband and wife together.

(*d*) None.

(*e*) Does not arise in view of reply to clause (*c*) above.

ಶ್ರೀ ವಿ. ಎಂ. ಘಾಡಿ.—ಉತ್ತರದಲ್ಲಿ ಹೇಳಿರುವಂತೆ 293 ಮಂದಿ ಉಪಾಧ್ಯಾಯರುಗಳನ್ನು ಯಾವ ವರ್ಷದಲ್ಲಿ ವರ್ಗ ಮಾಡಲಾಯಿತು ?

† ಶ್ರೀ ಎ. ಆರ್. ಬದರೀನಾರಾಯಣ್.—ಒಂದೇ ತಾಲ್ಲೂಕಿನಲ್ಲಿ ಅದೇ ಊರಿನವರನ್ನು ಅಲ್ಲೇ ಉಪಾಧ್ಯಾಯರನ್ನಾಗಿ ನೇಮಿಸಿಕೂಡದು ಎನ್ನುವ ಸರಕಾರದ ನೀತಿಯಿಂದಾಗಿ ಇದಕ್ಕೆ ತಕ್ಕ ಒಂದು ಪ್ರೋಗಾಂ ಹಾಕಿಕೊಂಡು ಅದರಂತೆ ಉಪಾಧ್ಯಾಯರುಗಳ ವರ್ಗಾವಣೆಯನ್ನು ಮಾಡಲಾಗಿದೆ.

ಶ್ರೀ ವಿ. ಎಂ. ಘಾಡಿ.—ಶಿಕ್ಷಕರು ಅದೇ ಊರುಗಳವರು ಅಲ್ಲದವರನ್ನೂ ಕೂಡ ನುಮ್ಮನೆ ವರ್ಗ ಮಾಡಿರುತ್ತಾರೆ. ಇದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಆರ್. ಬದರೀನಾರಾಯಣ್.—ಇಂತಹದು ಸರಕಾರದ ಗಮನಕ್ಕೆ ಬಂದಿಲ್ಲ. ಬಂದರೆ ನೂಕ್ತವಾಗಿ ಸರಿಮಾಡಬಹುದು.

ಶ್ರೀ ಕಾಗೋಡು ತಿಮ್ಮಪ್ಪ.—ವೇಲನ ದರ್ಜೆಯ ನೌಕರರಲ್ಲಿ ದಂಪತಿಗಳಾಗಿರುವವರನ್ನು ಒಂದೇ ಕಡೆ ಇರಬೇಕೆಂದು ಸರಕಾರದವರು ಮಾಡಿರುತ್ತಾರೆ. ಅದೇ ನೀತಿಯನ್ನು ಶಿಕ್ಷಕರ ಬಗ್ಗೆ ಕೂಡ ಅನುಸರಿಸಲು ತಕ್ಕ ಕ್ರಮಗಳನ್ನು ಸರಕಾರ ಮಾಡುವುದೇ ? ಇಂತಹವು ಕೋರಿಕೆ ಸರಕಾರಕ್ಕೆ ಬಂದರೆ ತಕ್ಕ ಕ್ರಮ ತೆಗೆದುಕೊಳ್ಳುವರೇ ?

ಶ್ರೀ ಎ. ಎರ್. ಬದರೀನಾರಾಯಣ್.—ದಂಪತಿಗಳನ್ನು ಒಂದೇ ಕಡೆ ಇಡಬೇಕೆಂದು ಸರಕಾರದ ನಿಯಮವೂ ಇದೆ. ಇದರಂತೆ 20 ದಂಪತಿಗಳು ಇದ್ದರು. ಇವರಲ್ಲಿ 7 ದಂಪತಿಗಳ ಕೇಸುಗಳನ್ನು ಇತ್ಯರ್ಥ ಮಾಡಿ ಅವರು ಒಂದೇ ಕಡೆ ಇರುವಂತೆ ಮಾಡಲಾಗಿದೆ. ಇನ್ನುಳಿದ ಮೂರು ಪ್ರಿಮೇಚೂರು ವರ್ಗವಾಗುವುದರಿಂದ ಹಾಗೆ ಮಾಡಿಲ್ಲ.

ಶ್ರೀ ಎಂ. ಬಿ. ರಾಮಸ್ವಾಮಿ.—ಎರಡು ವರ್ಷಗಳು ಇಲ್ಲವೇ ಮೂರು ವರ್ಷಗಳು ಒಂದೇ ಕಡೆಯಲ್ಲಿ ಶಿಕ್ಷಕರು ಕೆಲಸ ಮಾಡಬೇಕು. ಹಾಗೆ ಇರುವವರನ್ನು ವರ್ಗ ಮಾಡದೆ ಕೇವಲ ಎರಡು ವರ್ಷಗಳೊಳಗೆ ಕೆಲಸ ಮಾಡಿರುವ ಶಿಕ್ಷಕರನ್ನು ಬೇರೆ ಊರಿಗೆ ವರ್ಗಾಯಿಸುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ? ಇಂತಹ ಸಂದರ್ಭಗಳನ್ನು ಸರಕಾರದ ಗಮನಕ್ಕೆ ತಂದರೆ ಇದನ್ನು ಸರಿ ಮಾಡುತ್ತಾರೆಯೇ ?

ಶ್ರೀ ಎ. ಆರ್. ಬದರೀನಾರಾಯಣ್.—ಸಾಮಾನ್ಯವಾಗಿ ಪ್ರಿಮೆಚೂರ್ ಟ್ರಾನ್ಸ್‌ಫರ್ ಮಾಡುವುದಿಲ್ಲ. ಆದರೆ ಯಾರ ಮೇಲಾದರೂ ದೂರುಗಳು ಬಂದರೆ ಅಂತಹ ಕೇಸುಗಳನ್ನು ವಿಚಾರ ಮಾಡಿ ಅದರಲ್ಲಿ ಹುರುಳಿದ್ದರೆ ಆಗ ಅವರನ್ನು ವರ್ಗ ಮಾಡಲಾಗುತ್ತದೆ.

ಶ್ರೀ ಬಿ. ಬೈರಪ್ಪಾಜಿ.—ಒಂದೂರಿನಲ್ಲಿ ಕೆಲಸ ಮಾಡುವ ಶಿಕ್ಷಕರನ್ನು ಒಂದೇ ವರ್ಷದಲ್ಲಿ ಬೇರೆ ಬೇರೆ ತಾಲ್ಲೂಕುಗಳಿಗೆ ವರ್ಗಮಾಡಿರುತ್ತಾರೆ ಇಂತಹ ಶಿಕ್ಷಕರುಗಳಿಗೆ ಬಹಳ ಕಷ್ಟಗಳಾಗುತ್ತಿವೆ, ಇಂತಹ ಅನ್ಯಾಯಗಳನ್ನು ಸರಕಾರದವರು ಸರಿಪಡಿಸುತ್ತಾರೆಯೇ ?

ಶ್ರೀ ಎ. ಆರ್. ಬದರೀನಾರಾಯಣ್.—ಸರಕಾರದ ನೀತಿ ಒಂದೇ ವರ್ಷದಲ್ಲಿ ವರ್ಗ ಮಾಡಬೇಕು ಎಂದೇನಿಲ್ಲ. ಒಂದೇ ಕಡೆಯಲ್ಲಿ ಹತ್ತು ವರ್ಷಗಳಿಂದಲೂ ಕೆಲಸ ಮಾಡುತ್ತಿರುವವರನ್ನು ಮಾತ್ರ ವರ್ಗ ಮಾಡಬೇಕೆಂದು ಬೇರೆ ಕಡೆಗೆ ವರ್ಗ ಮಾಡಲಾಗಿದೆ. ಮೊದಲಿಗೆ ಹತ್ತು ವರ್ಷಗಳು ಇರುವವರನ್ನು ಮಾಡಲಾಗಿದೆ. ಇನ್ನು ಮುಂದೆ ಐದು ವರ್ಷಗಳು ಒಂದೇ ಕಡೆ ಇದ್ದವರನ್ನು ಬೇರೆ ಊರಿಗೆ ವರ್ಗ ಮಾಡಬೇಕು ಎಂದು ಇದೆ.

ಶ್ರೀ ವಿ. ಎಂ. ಫಾಡಿ.—27 ದಂಪತಿಗಳನ್ನು ಅವರು ಒಂದೇ ಕಡೆ ಇರುವಂತೆ ವರ್ಗಮಾಡಲಾಗಿದೆ ಎಂದು ಹೇಳಿದ್ದಾರೆ. ಇನ್ನೂ ಎಷ್ಟೋ ಜನ ದಂಪತಿಗಳಿದ್ದರೂ ಅವರನ್ನು ಒಂದೇ ಕಡೆ ಇರುವಂತೆ ಏಕೆ ವರ್ಗ ಮಾಡಲಿಲ್ಲ ? ಇವರೆಲ್ಲ ವಿರಹದಿಂದ ಬಳಲುತ್ತಿದ್ದರೂ ಸರಕಾರ ಏಕೆ ಇದರ ಕಡೆ ಗಮನ ಕೊಡುತ್ತಿಲ್ಲ ?

ಶ್ರೀ ಎ. ಆರ್. ಬದರಿನಾರಾಯಣ್.—ಸಾಮಾನ್ಯವಾಗಿ ದಂಪತಿಗಳು ಒಂದೇ ಕಡೆ ಇರಬೇಕೆಂದು ವರ್ಗ ಮಾಡಲಾಗಿದೆ. ಮಾನ್ಯ ಸದಸ್ಯರು ಹೇಳಿದಂತಹ ಯಾವುದಾದರೂ ಸಂದರ್ಭಗಳು ಇವೆ ಎಂದು ಸರಕಾರದ ಗಮನಕ್ಕೆ ತಂದರೆ ಆಗ ಅದನ್ನೂ ಸರಿಮಾಡುತ್ತೇನೆ.

## Percentage of Scheduled Castes and Scheduled Tribes Officials in Government Service

75. Sri H. B. LAKSHMANA (Bharmasagara).

Will the Chief Minister be pleased to state:—

the percentage of Officials in Government serviee belonging to Scheduled Castes and Scheduled Tri es at present, in accordance with the Government Order which stipulates that they should be given 18 per cent of representation in Government Service ?